ಮುಗಿದ ಬಳಿಕ, ಕೈಯಲ್ಲಿ ಹಣವಿಲ್ಲದೆ, ಮುಂದೇನು ಎಂದು ಚಿಂತೆಯಾಯಿತು. ಆಗ ದೆಹಲಿಯಲ್ಲಿರುವ ಅಂತರರಾಷ್ಟ್ರೀಯ ಕಥಕಳಿ ಕೇಂದ್ರದಲ್ಲಿ ಅಧ್ಯಾಪನ ಮತ್ತು ಪ್ರದರ್ಶನಕ್ಕಾಗಿ ನೇಮಕಾತಿಯ ಪ್ರಸ್ತಾಪ ಎದುರಾಯಿತು. ಅಂದಿನ ಪ್ರಸಿದ್ಧ ರಾಜತಂತ್ರಜ್ಞ ಸರ್ದಾರ್ ಕೆ.ಎಂ. ಪಣಿಕ್ಕರ್ ಅವರು 1960ರಲ್ಲಿ ಈ ಸಂಸ್ಥೆಯನ್ನು ದೆಹಲಿಯಲ್ಲಿ ಸ್ಥಾಪಿಸಿದ್ದರು. ಹಲವು ವರ್ಷಗಳ ಕಾಲ ಚೆನ್ನಾಗಿಯೇ ನಡೆದಿದ್ದ ಸಂಸ್ಥೆ ಹಣಕಾಸು ಮತ್ತು ಇತರ ಸಮಸ್ಯೆಗಳಿಂದಾಗಿ ಎರಡು ವರ್ಷಗಳ ಕಾಲ ಸ್ಥಗಿತಗೊಂಡಿತ್ತು. ನಾನು 1974ರಲ್ಲಿ ಈ ಕೇಂದ್ರಕ್ಕೆ ಸೇರಿದ್ದೆ. ಅದೇ ವರ್ಷ ಗಣರಾಜ್ಯೋತ್ಸವ ಪಥಸಂಚಲನಕ್ಕೆ ಶ್ರೀಲಂಕಾದ ಅಂದಿನ ಪ್ರಧಾನಿ ಸಿರಿಮಾವೋ ಬಂಡಾರುನಾಯಿಕೆ ಅತಿಥಿಯಾಗಿ ಬಂದಿದ್ದರು. ನಮ್ಮ ದೇಶದ ಅಂದಿನ ಪ್ರಧಾನಿ ಇಂದಿರಾಗಾಂಧಿ ಮತ್ತು ಬಂಡಾರು ನಾಯಿಕೆ ಅವರ ಮುಂದೆ ನಾನು ಕಥಕಳಿ ಪ್ರದರ್ಶನ ನೀಡಿದೆ.

ಹೀಗೆ ಕಥಕಳಿಯ ಪಯಣವನ್ನು ಕ್ಷಿಪ್ರವಾಗಿ ಹೇಳಬಹದಾದರೂ ಸಾಗಿದ ದಾರಿ ಸುಲಭವೇನೂ ಇರಲಿಲ್ಲ. ಇಂದು ಆ ದಾರಿಯನ್ನು ಹಿಂತಿರುಗಿ ನೋಡುತ್ತ, ಅಂದಿನ ಆಗುಹೋಗುಗಳನ್ನು ನೆನಪಿಸಿಕೊಳ್ಳುತ್ತ ಮಾತನಾಡುವುದಕ್ಕೆ ಖುಷಿಯಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಹಿಂದಿರುಗಿ ನೋಡಿದಾಗ, ಖುಷಿಯಾಗಿ ಮಾತನಾಡುವುದು ಸಾಧ್ಯವೆಂದಾದರೆ ಅದು ಸಂತೃಪ್ತಿಯ ಜೀವನ.

**◆ ನಿಮ್ಮನ್ನು ಅಷ್ಟೊಂದು ಆಕರ್ಷಿಸಿದ ಕಥಕಳಿಯ ಅನನ್ಯತೆಯೇನು?**

ಕಥಕಳಿಯ ವೇಷವನ್ನು ಧರಿಸಿದ ಮೇಲೆ ಪ್ರೇಕ್ಷಕರ ಪಾಲಿಗೆ ಅಗಾಧವಾದ ಆ ಪಾತ್ರವನ್ನು ನೋಡುವುದೇ ಒಂದು ಚಂದ. ಮಾನವ ಆಕೃತಿಯನ್ನು ಮೀರಿ ಎತ್ತರಕ್ಕೆ ಕಾಣುವ ಪಾತ್ರಗಳು ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಇಲ್ಲಿ 'ವಾಚಿಕ' ಇಲ್ಲದೇ ಇದ್ದರೂ, ಅಭಿನಯವೇ ಕಥೆಯನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡುತ್ತದೆ. ಕೇರಳದಲ್ಲಿರುವ ಧಾರ್ಮಿಕ ಕಲಾಪ್ರಕಾರಗಳು ಬಹಳ ಶ್ರೀಮಂತವಾದುವು. ನೀವು ಥೆಯ್ಯಂ, ಮುಡಿಯೆಟ್ಟು ಪ್ರದರ್ಶನಗಳನ್ನು ಗಮನಿಸಬಹುದು. ಥೆಯ್ಯಂ ಬಹಳ ಸೂಕ್ಷ್ಮವಾದ ಬಣ್ಣಗಾರಿಕೆಯನ್ನು ಒಳಗೊಂಡ, ಜಗತ್ತಿನಲ್ಲಿಯೇ ಅತ್ಯಾಕರ್ಷಕವಾದ ಕಲಾಪ್ರಕಾರ. ಸುಮಾರು 400ಕ್ಕೂ ಹೆಚ್ಚು ಪಾತ್ರಗಳನ್ನು ನೋಡಬಹುದು. ಕೆಲವಂತೂ ಎಷ್ಟೊಂದು ಸುಂದರವಾಗಿವೆ ಎಂದರೆ ಕಣ್ಣು ಕದಲಿಸುವುದು ಸಾಧ್ಯವಿಲ್ಲ. ಕಥಕಳಿಯ ಬಣ್ಣಗಾರಿಕೆ ಮತ್ತು ದಿರಿಸು ಥೆಯ್ಯಂನಷ್ಟು ಸೂಕ್ಷ್ಮವಾದ್ದಲ್ಲ. ಆದರೆ ನನ್ನ ಪ್ರಕಾರ ಕಥಕಳಿಯಲ್ಲಿ ಅಭಿವ್ಯಕ್ತಿಯು 'ಲೋಕಧರ್ಮಿ' ಎನ್ನುವುದಕ್ಕಿಂತ, ಅತ್ಯಂತ ಶೈಲೀಕೃತವಾದ ಅಭಿವ್ಯಕ್ತಿ ಎಂದು ಹೇಳುವುದು ಹೆಚ್ಚು ಸರಿ. ಭಾವನೆಗಳನ್ನೂ ಆಯಾ ರಸಕ್ಕೆ ಅನುಗುಣವಾಗಿ ಶೈಲೀಕರಿಸಿ, ತಿದ್ದಿ ತೀಡಿ ಪ್ರಸ್ತುತಪಡಿಸುವ ಕಲೆಯಿದು. ಪಾತ್ರಗಳನ್ನು ಅವುಗಳ ಗುಣಧರ್ಮಕ್ಕೆ ಅನುಗುಣವಾಗಿ ವಿಂಗಡಿಸಿ ಪ್ರಸ್ತುತಪಡಿಸಲಾಗುತ್ತದೆ. ಸತ್ವ ಗುಣದ ಪಾತ್ರಗಳಾದ ಭೀಮ, ಯುಧಿಷ್ಠಿರ, ಶ್ರೀರಾಮ ಮುಂತಾದ ವೇಷಗಳು 'ಪಚ್ಚವೇಷ' ಎಂದು ಹಸಿರು ಬಣ್ಣದಲ್ಲಿ ಗುರುತಿಸಿಕೊಂಡರೆ, ರಾವಣ, ದುರ್ಯೋಧನ ಮುಂತಾದ ರಜೋಗುಣದ ವೇಷಗಳನ್ನು 'ಕತ್ತಿವೇಷ' ಎಂದು ಪರಿಗಣಿಸಲಾಗುತ್ತದೆ. ಸ್ತ್ರೀವೇಷಗಳನ್ನು 'ಮಿಣುಕ್ಕು ವೇಷ' ಎನ್ನುತ್ತಾರೆ. ನಾರದ, ದೂರ್ವಾಸ ಮುಂತಾದ ಋಷಿ ವೇಷಗಳನ್ನೂ 'ಮಿಣುಕ್ಕು' ಎಂದೇ ಕರೆಯುತ್ತಾರೆ. ಹೀಗಿರುವ ವರ್ಗೀಕರಣಗಳು ಪ್ರೇಕ್ಷಕರೊಡನೆ ಸಂವಹನ ಮಾಡುವ ಒಂದು ವಿಧಾನವೂ ಹೌದು.

**◆ ಸಾಮಾನ್ಯವಾಗಿ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಕಥಕಳಿ ಪ್ರದರ್ಶನಗೊಂಡ ನಂತರ ಮತ್ತೆ ಯಾವುದೇ ಕಲಾಪ್ರದರ್ಶನಗಳಿರುವುದಿಲ್ಲ. ಅದೇಕೆ ಹಾಗೆ?**

ಕಥಕಳಿಯು ನೋಡುವುದಕ್ಕೆ ಆಕರ್ಷಕ ಬಣ್ಣಗಾರಿಕೆಯ, ರಂಗುರಂಗಾಗಿರುವ ನೃತ್ಯ ನಾಟಕ. ಅದರ ಹಿಮ್ಮೇಳವೂ ಮಂದ್ರದಿಂದ ತಾರಕಕ್ಕೆ ಏರಿ ಮುಕ್ತಾಯವಾಗುವ ವೇಳೆ ಇಡೀ ಸಭೆಯು ಒಂದು ರೋಮಾಂಚನ ಗುಂಗಿನಲ್ಲಿ ಮುಳುಗಿಬಿಡುತ್ತದೆ. ಹಿನ್ನೆಲೆಯಲ್ಲಿರುವ ಚೆಂಡೆ ಮತ್ತು ಮದ್ದಳೆಯ ಅನುರಣನ ತುಂಬಾ ತೀವ್ರ ಪರಿಣಾಮ ಬೀರುತ್ತದೆ. ಅದರಿಂದ ಹೊರಬಂದು ಬೇರೆ ಕಲೆಯೊಂದನ್ನು ಆಸ್ವಾದಿಸಬೇಕಾದರೆ ತುಸು ಹೊತ್ತು ಹಿಡಿಯುತ್ತದೆ. ಹಾಗಾಗಿ ಸಾಮಾನ್ಯವಾಗಿ ಕಲಾವಿದರು ಕಥಕಳಿ